591 ಶ್ರೀ ಸಿದ್ದು ಸವದಿ

ಮಾನ್ಯ ನಗರಾಭಿವೃದ್ಧಿ ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು

ಅ) ಎ.ಡಿ.ಬಿ ಯಿಂದ ಸಾಲ ಪಡೆದು ಕರ್ನಾಟಕದ ಸಣ್ಣ ನಗರಗಳ ಮೂಲಭೂತ ಸೌಕರ್ಯಗಳ ಅಭಿವೃದ್ಧಿಪಡಿಸಲು ಆಯ್ಕೆಯಾದ ಪಟ್ಟಣಗಳೆಷ್ಟು; ಅವು ಯಾವುವು;

ಎ.ಡಿ.ಬಿ.ನೆರವಿನೊಂದಿಗೆ ಒಟ್ಟು 41 ಪಟ್ಟಣಗಳನ್ನು ಅಭಿವೃದ್ಧಿ ಪಡಿಸಲು ಆಯ್ಕೆಗೊಂಡಿರುತ್ತವೆ. ವಿವರಗಳು ಈ ಕೆಳಕಂಡಂತಿದೆ.

1) ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯ (**ಕೆಯುಐಡಿಪಿ**)ಅಡಿಯಲ್ಲಿ ತುಮಕೂರು, ಚನ್ನಪಟ್ಟಣ, ರಾಮನಗರ, ಮಂಡ್ಯ, ಮದ್ದೂರು ಮತ್ತು ಮೈಸೂರು ಪಟ್ಟಣಗಳು

2) ಕರ್ನಾಟಕ ನಗರಾಭಿವೃದ್ಧಿ ಮತ್ತು ಕರಾವಳಿ ಪರಿಸರ ಕಾರ್ಯನಿರ್ವಹಣಾ ಯೋಜನೆಯ (**ಕುಡ್ಸೆಂಪ್**) ಅಡಿಯಲ್ಲಿ ಮಂಗಳೂರು, ಉಲ್ಲಾಳ ಮತ್ತು ಪುತ್ತೂರು, ಉಡುಪಿ ಮತ್ತು ಕುಂದಾಪುರ, ಅಂಕೋಲಾ, ಭಟ್ಕಳ, ದಾಂಡೇಲಿ, ಕಾರವಾರ ಮತ್ತು ಸಿರ್ಸಿ ಪಟ್ಟಣಗಳು

3) ಉತ್ತರ ಕರ್ನಾಟಕ ನಗರ ವಲಯ ಹೂಡಿಕೆ ಯೋಜನೆ (**ಎನ್‌ಕೆಯುಎಸ್‌ಐಪಿ**) ಅಡಿಯಲ್ಲಿ ಬಾದಾಮಿ, ಬೀದರ್, ಬಳ್ಳಾರಿ, ಬೆಳಗಾಂ, ಬಿಜಾಪುರ, ದಾವಣಗೆರೆ, ಗದಗ್-ಬೆಟಗೇರಿ, ಗಂಗಾವತಿ, ಗೋಕಾಕ್, ಗುಲ್ಬರ್ಗಾ, ಹಾವೇರಿ, ಹೊಸಪೇಟೆ, ಹುಬ್ಬಳ್ಳಿ-ಧಾರವಾಡ, ಜಮಖಂಡಿ, ಕೊಪ್ಪಳ, ರಬಕವಿ-ಬನಹಟ್ಟಿ, ರಾಯಚೂರು, ರಾಣಿಬೆನ್ನೂರು, ಯಾದಗಿರ್, ಬಸವಕಲ್ಯಾಣ, ಸಿಂಧನೂರು, ಶಹಬಾದ್, ನಿಪ್ಪಾಣಿ ಇಳ್‌ಕಲ್ ಮತ್ತು ಚಾಮರಾಜನಗರ ಪಟ್ಟಣಗಳು.

ಆ) ಈ ಯೋಜನೆ ಎಂದಿನಿಂದ ಜಾರಿಗೆ ಬಂದಿದೆ: ಎಷ್ಟು ನಗರಗಳನ್ನು ಈಗಾಗಲೇ ಅಭಿವೃದ್ಧಿ ಪಡಿಸಲಾಗಿದೆ: ಎಷ್ಟು ಅನುದಾನ ಖರ್ಚಾಗಿದೆ. (ಪ್ರತ್ಯೇಕವಾಗಿ ಮಾಹಿತಿ ನೀಡುವುದು);

1) **ಕೆಯುಐಡಿ** ಯೋಜನೆಯು 1996ರಿಂದ ಜಾರಿಗೆ ಬಂದಿದ್ದು, ಎಲ್ಲಾ ಪಟ್ಟಣಗಳನ್ನು ರೂ.415ಕೋಟಿಗಳ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗಿದೆ.

2) **ಕುಡ್ಸೆಂಪ್** ಯೋಜನೆಯು 2000ರಿಂದ ಜಾರಿಗೆ ಬಂದಿದ್ದು, ಎಲ್ಲಾ ಪಟ್ಟಣಗಳ ಕಾಮಗಾರಿಗಳು ಮುಕ್ತಾಯ ಹಂತದಲ್ಲಿದ್ದು ಶೇ.90% ಪ್ರಗತಿಯಾಗಿದ್ದು, ರೂ.889ಕೋಟಿಗಳನ್ನು ಈಗಾಗಲೇ ವೆಚ್ಚ ಮಾಡಲಾಗಿದೆ.

3) **ಎನ್‌ಕೆಯುಎಸ್‌ಐಪಿ** ಗೆ ಯೋಜನೆಯು 25 ನೇ ಏಪ್ರಿಲ್ 2008 ರಿಂದ ಚಾಲ್ತಿಗೆ ಬಂದಿರುತ್ತದೆ. ಇಲ್ಲಿಯವರೆಗೆ ಒಟ್ಟಾರೆ ಸುಮಾರು ರೂ.12 ಕೋಟಿಗಳು ಖರ್ಚಾಗಿರುತ್ತವೆ.

ಇ) ಸದರಿ ಯೋಜನೆಯಲ್ಲಿ ಆಯ್ಕೆಯಾದ ನಗರಗಳಲ್ಲಿ ಎಂದಿನಿಂದ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು;

1) **ಕೆಯುಐಡಿಪಿ** ಯೋಜನೆ ಈಗಾಗಲೇ ಮುಕ್ತಾಯವಾಗಿದೆ.

2) **ಕುಡ್ಸೆಂಪ್** ಯೋಜನೆ ಕಾಮಗಾರಿಗಳು ಶೇ.90 ರಷ್ಟು ಮುಗಿದಿದ್ದು ಮುಕ್ತಾಯ ಹಂತದಲ್ಲಿದೆ. ಈ ಯೋಜನೆಯನ್ನು ದಿ: 30-09-2009 ರ ವರೆಗೆ ವಿಸ್ತರಿಸಲಾಗಿದೆ.

3) **ಎನ್‌ಕೆಯುಎಸ್‌ಐಪಿ** ಯೋಜನೆಗೆ ಸಂಬಂಧಿಸಿದಂತೆ ಮೊದಲನೇ ಟ್ರ್ಯಾಂಚ್‌ನಲ್ಲಿರುವ ಪಟ್ಟಣಗಳಿಗೆ ಟೆಂಡರ್ ಕರೆಯಲಾಗಿದೆ. ಟೆಂಡರ್ ಪ್ರಕ್ರಿಯೆ ಮುಗಿದ ನಂತರ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ಎರಡನೇ ಟ್ರ್ಯಾಂಚ್‌ನಲ್ಲಿ 21 ಪಟ್ಟಣಗಳನ್ನು ಆಯ್ಕೆಮಾಡಲಾಗಿದ್ದು, ಏ.ಡಿ.ಬಿ. ಅನುಮೋದನೆಯನ್ನು ನಿರೀಕ್ಷಿಸಲಾಗಿದೆ.

ಈ) ಆಯ್ಕೆಯಾಗಿ ನಾಲ್ಕಾರು ವರ್ಷಗಳಾದರೂ ಕಾಮಗಾರಿಗಳನ್ನು ಪ್ರಾರಂಭಿಸದಿರಲು ಕಾರಣಗಳೇನು;

ಕೆಯುಐಡಿಪಿ ಮತ್ತು ಕುಡ್ಸೆಂಪ್ ಗೆ ಅನ್ವಯಿಸುವುದಿಲ್ಲ.

ಎನ್‌ಕೆಯುಎಸ್‌ಐಪಿಗೆ ಸಂಬಂಧಿಸಿದಂತೆ ಎ.ಡಿ.ಬಿ.ಯೊಂದಿಗೆ ಮೊದಲನೇ ಟ್ರ್ಯಾಂಚ್ ಕರಾರು ಪತ್ರಕ್ಕೆ 23 ಜನವರಿ 2008 ರಂದು ಸಹಿ ಮಾಡಲಾಗಿದೆ. ಸಾಲದ ಒಪ್ಪಂದವು 25 ನೇ ಏಪ್ರಿಲ್ 2008 ರಿಂದ ಚಾಲ್ತಿಗೆ ಬಂದಿರುತ್ತದೆ.

ಪ್ಯಾಕೇಜ್‌ಗಳಿಗೆ ಕಾರ್ಯಕ್ರಮ ಸಮಾಲೋಚಕರನ್ನು ನೇಮಕಮಾಡಲಾಗಿದೆ. ಕಾರ್ಯಕ್ರಮ ಸಮಾಲೋಚಕರು ಯೋಜನಾ ಪಟ್ಟಣಗಳಲ್ಲಿ ಸರ್ವೆ ಅಧ್ಯಯನಗಳನ್ನು ನಡೆಸಿ ವಿವಿಧ ವರದಿಗಳನ್ನು ತಯಾರಿಸಿರುತ್ತಾರೆ.

ಮೊದಲನೇ ಟ್ರ್ಯಾಂಚ್‌ನಲ್ಲಿರುವ ಪಟ್ಟಣಗಳಿಗೆ ಟೆಂಡರ್ ಕರೆಯಲಾಗಿದೆ.

592 ಶ್ರೀ ಮಹದೇವ ಪ್ರಸಾದ ಹೆಚ್.ಎಸ್.

ಬಿ.ಎಸ್ ಯಡಿಯೂರಪ್ಪ ಮಾನ್ಯ ಮುಖ್ಯಮಂತ್ರಿಗಳು

ಅ) ಶ್ರೀ ಮಲೈಮಹದೇಶ್ವರ ಬೆಟ್ಟದಲ್ಲಿ ಜಾನಪದ ಅಧ್ಯಯನ ಕೇಂದ್ರ ಸ್ಥಾಪಿಸಲು ಸರ್ಕಾರ ಮಂಜೂರಾತಿ ನೀಡಿದೆಯೇ;

ಹೌದು

ಆ) 2007–08 ಮತ್ತು 2008–09 ಹಾಗೂ 2009–10ನೇ ಸಾಲಿನಲ್ಲಿ ಆಯವ್ಯಯದಲ್ಲಿ ಒದಗಿಸಲಾದ ಅನುದಾನ ಎಷ್ಟು; ಖರ್ಚಾದ ಹಣ ಎಷ್ಟು;

1. 2007–08ನೇ ಸಾಲಿನಲ್ಲಿ ಜಾನಪದ ಅಧ್ಯಯನ ಕೇಂದ್ರದ ಕಾರ್ಯಕ್ರಮಕ್ಕೆ ಸ್ಥಳಾವಕಾಶ ಮತ್ತು ಕೇಂದ್ರದ ಕಾರ್ಯಕ್ರಮಕ್ಕೆ ಸ್ಥಳಾವಕಾಶ ಮತ್ತು ಕೇಂದ್ರದ ಧ್ಯೇಯೋದ್ದೇಶಗಳ ರಚನೆ, ಸಮಿತಿ ರಚನೆ ಆಗಬೇಕಾದ ಹಿನ್ನೆಲೆಯಲ್ಲಿ ಹಣವನ್ನು ಮಂಜೂರು ಮಾಡಿರುವುದಿಲ್ಲ.

2. 2008–09ನೆಯ ಸಾಲಿನಲ್ಲಿ ಹಣವನ್ನು ಆಯವ್ಯಯದಲ್ಲಿ ಒದಗಿಸಲಾಗಿರುವುದಿಲ್ಲ.

3. 2009–10ನೇ ಸಾಲಿನಲ್ಲಿ ಉದ್ದೇಶಿತ ಯೋಜನೆಗಾಗಿ ಇಲಾಖೆಯ ಕ್ರಿಯಾ ಯೋಜನೆಯಲ್ಲಿ ರೂ. 1.75 ಕೋಟಿಗಳಿಗೆ ಅವಕಾಶ ಕಲ್ಪಿಸಿಕೊಳ್ಳಲಾಗಿದ್ದು, ಈ ಮೊತ್ತವನ್ನು ಬಿಡುಗಡೆ ಮಾಡಲು ಕ್ರಮ ವಹಿಸಲಾಗುವುದು.

ಇ) ಈ ಅಧ್ಯಯನ ಕೇಂದ್ರ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ಸರ್ಕಾರ ರೂಪಿಸುತ್ತಿರುವ ಕಾರ್ಯಕ್ರಮಗಳೇನು?

1. ಜಾನಪದ ಅಧ್ಯಯನ ಕೇಂದ್ರ ವ್ಯಾಪ್ತಿ, ರೂಪರೇಷೆ, ರೀತಿ ನೀತಿಗಳನ್ನು ನಿರ್ಧರಿಸಲು ಜಾನಪದ ಅಧ್ಯಯನ ಸಲಹಾ ಸಮಿತಿಯನ್ನು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ರಚಿಸಲಾಗಿದೆ. ನಶಿಸಿ ಹೋಗುತ್ತಿರುವ